ರಾಜ್ಯದ ನೇಕಾರರ ಮುನ್ನಡೆ ಯೋಜನೆ ಮೇರೆಗೆ ಹಂಚಲಾದ ಪೊಬಲಗಂ

೫೨. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ರಾಜ್ಯದಲ್ಲಿ ನೇಕಾರರಿಗೆ ಮುನ್ನಡೆ ಯೋಜನೆಯ ಮೇರೆಗೆ ಹಣ ಹಂಚಲಾಗಿದೆಯೇ ;

ಆ) ಹಾಗಿದ್ದಲ್ಲಿ ಒಟ್ಟು ಎಷ್ಟು ಜನರಿಗೆ ಹಂಚಲಾಗಿದೆ ಮತ್ತು ಇದರ ಪೊತ್ತವೆಷ್ಟು ?*

ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆ ಬಗ್ಗೆ

೫೩. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಹೊಸಪೇಟೆ ವಿಜಯನಗರ ಉಕ್ಕು ಕಾರ್ಖಾನೆ ಪ್ರಾರಂಭಿಸುವಲ್ಲಿ ಕೇಂದ್ರ ಸರ್ಕಾರದ ವಿಳಂಬದ ಬಗ್ಗೆ ಸರ್ಕಾರದವರ ನಿಲುಮೆಯೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕಾ ಮಂತ್ರಿಗಳು).—

(ಅ) ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಯಲ್ಲಿ ಆಗಿರುವ ವಿಳಂಬಕ್ಕೆ ರಾಜ್ಯ ಸರ್ಕಾರವು ತೀವ್ರ ಕಳವಳಗೊಂಡಿದೆ. ಈ ಯೋಜನೆಗೆ ಬೇಕಾಗುವ ಬಂಡವಾಳ ಹೂಡಿಕೆ ಬಗ್ಗೆ ತ್ವರಿತವಾದ ತೀರ್ಮಾನ ವನ್ನು ಕೈಗೊಂಡು ಕಾರ್ಖಾನೆಯ ಕೆಲಸವನ್ನು ಆದಷ್ಟು ಬೇಗ ಪ್ರಾರಂಭಿಸಬೇಕೆಂದು ಕೇಂದ್ರ ಸರ್ಕಾರ ವನ್ನು ರಾಜ್ಯ ಸರ್ಕಾರವು ಸತತವಾಗಿ ಒತ್ತಾಯಪಡಿಸುತ್ತಿದೆ.

ಸಿಮೆಂಟ್ ಅಭಾವದ ಬಗ್ಗೆ.

೫೪. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸಾಮಾನ್ಯ ಜನರಿಗೆ ಸಿಮೆಂಟ್ ಸಿಗದೆ ಮನೆ ಕಟ್ಟಿಸಲು ತೀರಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸಿಮೆಂಟ್ ವಿತರಣೆ ತೀರಾ ಅತೃಪ್ತಿಕರವಾಗಿದ್ದು ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಸಾಮಾನ್ಯ ಜನರಿಗೆ ಕಡಿಮೆ ಬೆಲೆಯಲ್ಲಿ ಸಿಮೆಂಟ್ ಸಿಗಲು ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು). —

(ಅ) ವಿದ್ಯುಚ್ಛಕ್ತಿ ಕೊರತೆಯಿಂದ ಸಿಮೆಂಟ್ ಉತ್ಪಾದನೆ ಕಡಿಮೆಯಾಗಿರುವುದರಿಂದ ಜನರಿಗೆ ಸಿಮೆಂಟ್ ಸಿಗದೇ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ

(ಆ) ನಿಯಂತ್ರಿತ ಸಿಮೆಂಟನ್ನು ವಿತರಣೆ ಮಾಡಲು ನಿರ್ದಿಷ್ಟವಾದ ನಿಯಮಗಳನ್ನು ಅನುಸರಿಸ ಲಾಗುತ್ತಿದೆ ನಿಯಂತ್ರಿತ ಸಿಮೆಂಟಿನ ಪೂರೈಕೆ ಬಹಳ ಕಡಿಮೆಯಾಗಿರುವುದರಿಂದ ವಿತರಣೆ ಮಾಡುವುದು ಕಷ್ಟವಾಗಿದೆ ಮತ್ತು ಬಳಕೆದಾರರಿಗೆ ಅಸಂತೃಪ್ತಿ ಉಂಟಾಗಿದೆ ಭ್ರಷ್ಟಾಚಾರದ ಬಗ್ಗೆ ಕೆಲವು ದೂರು ಗಳು ಬಂದಿದ್ದು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಇ) ಕೆಲವು ಸಿಮೆಂಟ್ ಉತ್ಪಾದಕ ಘಟಕಗಳಿಗೆ ಕಳೆದ ಒಂದು ವಾರದಿಂದ ತಾತ್ಕಾಲಿಕವಾಗಿ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಒದಗಿಸಿ, ಇದರಿಂದ ಉತ್ಪಾದಿಸುವ ಹೆಚ್ಚುವರಿ ಸಿಮೆಂಟನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕೆಂದು ನಿರ್ದೇಶಿಸಲಾಗಿದೆ. ಈ ಸಿಮೆಂಟನ್ನು ಸಾರ್ವಜನಿಕ ವಿತರಣೆಗೂ ಸರ್ಕಾರಿ ಕೆಲಸಗಳಿಗೂ ಉಪಯೋಗಿಸಲಾಗುವುದು ಮುಂದಿನ ಎರಡು ವಾರದಲ್ಲಿ ಸರ್ಕಾರವೂ ೮೦೦೦ ಟನ್ ಸಿಮೆಂಟನ್ನು ಎಲ್ಲಾ ಜಿಲ್ಲೆಗಳಿಗೂ ಹಂಚಲಾಗುವುದು.

---

* Reply not received.